# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಮುಖ್ಯ ಆಯುಕ್ತರು ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು-560002**

ಸಂಖ್ಯೆ: ಬಿ12(1ಜಿ)ಪಿಆರ್/150/2023-24 ದಿನಾಂಕ: 11. 3. 24

## ಸುತ್ತೋಲೆ

ವಿಷಯ: ಪಾಲಿಕೆಯ ವಿವಿಧ ಇಲಾಖೆಯಲ್ಲಿ ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಿಕೊಳ್ಳದ ವಿವಿಧ ವೃಂದದ ಗ್ರೂಪ್ 'ಎ, 'ಬಿ, 'ಸಿ' ಮತ್ತು 'ಡಿ' ವೃಂದದ ಅಧಿಕಾರಿ / ನೌಕರರುಗಳ ಮಾಹಿತಿಗಳನ್ನು ಒದಗಿಸುವ ಬಗ್ಗೆ.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳ ಎರಡು ವರ್ಷಗಳ ಪರೀಕ್ಷಾರ್ಥ ಸೇವಾ ಅವಧಿಯನ್ನು ನಿಗಧಿತ ಅವಧಿಯಲ್ಲಿ ಪೂರೈಸದೇ ವಿಳಂಬವಾಗಿ ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಲು ಪ್ರಸ್ತಾವನೆಯನ್ನು ಮುಖ್ಯ ಆಯುಕ್ತರ ಕಛೇರಿ ಆಡಳಿತ ಶಾಖೆಗೆ ಸಲ್ಲಿಸುತ್ತಿರುವುದು ಕಂಡುಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಪಾಲಿಕೆಯ ವಿವಿಧ ಕಛೇರಿಗಳಲ್ಲಿ ಅನುಕಂಪದ ಆಧಾರದ ಮೇಲೆ ಮತ್ತು ನೇರ ನೇಮಕಾತಿ ಮೂಲಕ ನೇಮಕಗೊಂಡು ಇಲಾಖಾ ಪರೀಕ್ಷೆಗಳನ್ನು ನಿಗಧಿತ ಅವಧಿಯೊಳಗೆ ಪಾಸು ಮಾಡದೇ ಎರಡು ವರ್ಷಗಳ ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಿಕೊಳ್ಳದ ಗ್ರೂಪ್ 'ಎ, 'ಬಿ, 'ಸಿ' ಮತ್ತು 'ಡಿ'ವೃಂದದ ಎಲ್ಲಾ ಅಧಿಕಾರಿ/ನೌಕರರುಗಳ ಸೇವಾ ಪುಸ್ತಕ, ಇಲಾಖಾ ಪರೀಕ್ಷೆಗಳ ಪ್ರಮಾಣ ಪತ್ರ, ವಾರ್ಷಿಕ ಕಾರ್ಯನಿರ್ವಹಣಾ ವರದಿ ಹಾಗೂ ಕಂಪ್ಯೂಟರ್ ಸಾಕ್ಷರತಾ ಪ್ರಮಾಣ ಪತ್ರದೊಂದಿಗೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಮಾಹಿತಿಗಳನ್ನು ಇದರೊಂದಿಗೆ ಲಗತ್ತಿಸಿರುವ ನಿಗಧಿತ ನಮೂನೆಯಲ್ಲಿ ದೃಢೀಕರಣದೊಂದಿಗೆ 7 ದಿವಸಗಳೊಳಗಾಗಿ ಮುಖ್ಯ ಆಯುಕ್ತರ ಕಛೇರಿ ಆಡಳಿತ ಶಾಖೆಗೆ ತಪ್ಪದೇ ಕಳುಹಿಸಿಕೊಡಲು ಈ ಸುತ್ತೋಲೆ ಮೂಲಕ ಸೂಚಿಸಿದೆ.

11/3

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

07/03/24

**ಪ್ರತಿಯನ್ನು**: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಿದೆ.

: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.

: ವಿಶೇಷ ಆಯುಕ್ತರು (ಆಡಳಿತ) (ಮಾಹಿತಿ ತಂತ್ರಜ್ಞಾನ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.

: ವಲಯ ಅಪರ/ಜಂಟಿ ಆಯುಕ್ತರು ರವರುಗಳಿಗೆ ಕಳುಹಿಸಿದೆ.

: ನಿರ್ದೇಶಕರು (ಮಾಹಿತಿ ತಂತ್ರಜ್ಞಾನ) ರವರಿಗೆ ಕಳುಹಿಸಿದೆ.

: ಉಪ ಮುಖ್ಯ ಮಾಹಿತಿ ಅಧಿಕಾರಿ ರವರಿಗೆ ಕಳುಹಿಸುತ್ತಾ, ಪಾಲಿಕೆಯ ವೈಬ್‌ಸೈಟ್‌ನಲ್ಲಿ ಮೂಲಕ ಪ್ರಚುರ ಪಡಿಸಲು ಸೂಚಿಸಿದೆ.

: ಎಲ್ಲಾ ವಲಯ ಇಲಾಖಾ ಮುಖ್ಯಸ್ಥರುಗಳಿಗೆ ಕಳುಹಿಸಿದೆ.

: ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕಳುಹಿಸಿದೆ.

: ಕಛೇರಿ ಪ್ರತಿ.

SDA 13/03/24

ಸಂಖ್ಯೆ: 1562
ದಿನಾಂಕ: 13/03/2024

# ನಮೂನೆ

| ಕ್ರಮ ಸಂಖ್ಯೆ | ಶ್ರೀಯುತರ ಹೆಸರು ಮತ್ತು ಪದನಾಮ | ಪಾಲಿಕೆಯ ಸೇವೆಗೆ ನೇಮಕಗೊಂಡಿರುವ ದಿನಾಂಕ | ಎರಡು ವರ್ಷಗಳು ಪೂರ್ಣಗೊಳಿಸಿರುವ ದಿನಾಂಕ | ಹುದ್ದೆಗೆ ನಿಗಧಿಪಡಿಸಿರುವ ಇಲಾಖಾ ಪರೀಕ್ಷೆಗಳ ಪೈಕಿ ಕೊನೆಯದಾಗಿ ಪಾಸು ಮಾಡಿರುವ ಇಲಾಖಾ ಪರೀಕ್ಷೆ ದಿನಾಂಕ |
|---|---|---|---|---|
| 1 | | | | |
| 2 | | | | |